ಪಿ. **ಡಬ್ಲೂ : 1**

ಸಾಕ್ಷಿಗೆ ದಿನಾಂಕಃ **17.07.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 2ನೇ ಎದುರುದಾರರ ಪರಃಶ್ರೀ ಕೆ.ಪಿ.ಕೆ. ವಕೀಲರಿಂದ:</u>**

ನಾನು ಪ್ರಥಮ ಪಿ.ಯು.ಸಿ.ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಕಿರುಗಾವಲಿನಿಂದ ಬೆಂಗಳೂರಿಗೆ ಹೋಗುವಾಗ ಅಪಘಾತವಾಗಿರುತ್ತದೆ. ಆ ದಿನ ನಾನೆ ಬೈಕ್ ಚಾಲನೆ ಮಾಡುತ್ತಿದ್ದೆ ಎದಂರೆ ಸರಿ. ಸದರಿ ಬೈಕು ನನಗೆ ಸೇರಿದ್ದಾಗಿದ್ದು, ಈಗಲೂ ನನ್ನ ಹೆಸರಿನಲ್ಲಿಯೇ ಇರುತ್ತದೆ. ಸದರಿ ಬೈಕಿಗೆ ಅಪಘಾತ ಕಾಲಕ್ಕೆ ವಿಮ ಚಾಲ್ತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಬಸ್ಸು ಮತ್ತು ನಮ್ಮ ಬೈಕಿಗೆ ಮುಖ ಮುಖಿ ಡಿಕ್ಕಿಯಾಗಿತ್ತು ಎಂದರೆ ಸರಿ. ನಾನು ಬೈಕಿನಲ್ಲಿ ರಸ್ತೆಯ ಬಲಭಾಗಕ್ಕೆ ಚಲಿಸಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಪೋಲೀಸ್ ದಾಖಲೆಗಳಲ್ಲಿ ನಮ್ಮ ಬೈಕು ರಸ್ತೆಯ ಬಲಭಾಗದಲ್ಲಿ ಬಿದ್ದಿತ್ತು ಎಂದು ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಬೈಕು ಬಸ್ಸಿನ ಎಡಬಾಗಕ್ಕೆ ಡಿಕ್ಕಿಪಡಿಸಿರುತ್ತದೆ ಎಂದರೆ ಸರಿಯಲ್ಲ. ನಾನು ಅತೀ ವೇಗವಾಗಿ ಮತ್ತು ಅಜಾಗರೂಕತೆಯಿಂದ ಬೈಕನ್ನು ಚಾಲನೆ ಮಾಡಿಕೊಂಡು ಹೋಗಿ ಸ್ಕೂಲ್ ಬಸ್ಸಿ ಗೆ ಡಿಕ್ಕಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಬಸ್ಸಿನಲ್ಲಿ ಮಕ್ಕಳು ಇರುವ ಕಾರಣ ಅದು ನಿಧಾನವಾಗಿ ಚಲಿಸುತ್ತದೆ ಎಂದರೆ ಅ ದಿನ ವೇಗವಾಗಿ ಚಾಲನೆ ಮಾಡಿಕೊಂಡು ಬರುತ್ತಿದ್ದರು. ಅಪಘಾತವಾದಾಗ ನನಗೆ ಪ್ರಜ್ಞೆ ಇತ್ತು ಎಂದರ ಸರಿ. ಸದರಿ ಕಾಲಕ್ಕೆ ಸ್ಥಳೀಯರು ಮತ್ತು ದಾರಿಹೋಕರು ನನ್ನನ್ನು ಉಪಚರಿಸಿರುತ್ತಾರೆ. ಸ್ಥಳದಲ್ಲಿ ನನ್ನ ಸ್ನೇಹಿತರು ಮತ್ತು ಸಂಬಂದಿಕರು ಇದ್ದು, ಸ್ಥಳೀಯರು ಇರಲಿಲ್ಲ ಎಂದರೆ ಸರಿಯಲ್ಲ.

2) ಅಪಘಾತಾದ ನಂತರ ನೇರವಾಗಿ ಮಣಿಪಾಲ್ ಅಸ್ಪತ್ರೆಗೆ ಹೋಗಿರುತ್ತೇನೆ. ಒಂದು ವೇಳೆ ಬಸ್ಸಿನಿಂದ ಅಪಘಾತವಾಗಿದ್ದರೇ ಹತ್ತಿರದ ಸರ್ಕಾರಿ ಅಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದೆ ಅದರೆ ಖಾಸಗೀ ಅಸ್ಪತ್ರೆಗೆ ಹೋಗಿ ದಾಖಲೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮಣಿಪಾಲ್ ಅಸ್ಪತ್ರೆಯಲ್ಲಿ ಬಲಭಾಗದ ಕಾಲು ಮತ್ತು ಹೊಟ್ಟೆಗೆ ಚಿಕಿತ್ಸೆ ಪಡೆದಿರುತ್ತೇನೆ. ನಾನು ಸದರಿ ಅಸ್ಪತ್ರೆಯಲ್ಲಿ ಒಂದು ತಿಂಗಳುಗಳ ಕಾಲ ನಿಗಾಘಟಕದಲ್ಲಿ ಇದ್ದೆ ಎಂಬ ಬಗ್ಗೆ ದಾಖಲೆ ಹಾಜರುಪಡಿಸಲ್ಲ ಎಂದರೆ ಸರಿಯಲ್ಲ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಡಾಃ ಅಜಯ್ ಹೆಗ್ಗಡೆ ಅಗಿರುತ್ತಾರೆ. 10 ರಿಂದ 15

ದಿನಗಳ ಅಂತರದಲ್ಲಿ  7 ರಿಂದ 8 ಬಾರಿ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ಡಾಃ ಅಜಯ್ ಹೆಗ್ಗಡೆ ರವರೆ ಸದರಿ ಶಸ್ತ್ರ ಚಿಕಿತ್ಸೆಗಳನ್ನು ಮಾಡಿರುತ್ತಾರೆ. ನಾನು ಸದರಿ ಅಸ್ಪತ್ರೆಯನ್ನು ಹೊರತುಪಡಿಸಿ ಬೇರೆ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ. ನಾನು ದಿನಾಂಕ 24.07.2023 ರಿಂದ 31.08.2023 ರವರಗೆ ಚಿಕಿತ್ಸೆ  ಪಡದುಕೊಂಡ ಬಗ್ಗೆ ದಾಖಲೆ ಇದ್ದು,  7 – 8 ಬಾರಿ ಶಸ್ತ್ರ ಚಿಕಿತ್ಸೆಗೆ ಒಳಗಾದ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಾನು ಒಂದು ವರುಷಗಳ ಕಾಲ ಹಾಸಿಗೆ ಹಿಡಿದಿದ್ದೆ ಎಂಬ ಸಂಬಂದವಾಗಿ ವೈದ್ಯರು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.  ದಿನಾಂಕ 24.07.2023 ರಿಂದ 31.08.2023 ರವರೆಗೆ ನಾನು ಅಸ್ಪತ್ರೆಯಲ್ಲಿ  ತರಚಿದ ಗಾಯಗಳಿಗೆ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 13.10.2023 ಮತ್ತು 18.10.2023 ರಂದು ಅಪಘಾತದ ಗಾಯಕ್ಕೆ ನಾನು ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ದಿನಾಂಕ 31.08.2023 ರಂದು ನಾನು ಸಂಪೂರ್ಣವಾಗಿ ಗುಣಮುಖ ಅಗಿರುತ್ತೇನೆಂದು ಬಿಡುಗಡೆ ಮಾಡಿದ್ದು  ಅನಂತರ ನಾನು ಈ ಮೇಲೆ ಹೇಳಿದ ಚಿಕಿತ್ಸೆಯನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು 5 ತಿಂಗಳು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆಂದು ಹೇಳುವುದು ಸುಳ್ಳು ಹೇಳುತ್ತಿದ್ದೇನೆ  ಎಂದರೆ ಸರಿಯಲ್ಲ.

3) ನಾನು ಮೈಸೂರಿನಲ್ಲಿ ಬಾಡಿಗೆ ಮನೆ ಮಾಡಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದ ಎಂದು ಹೇಳುವ ಸಂಬಂದವಾಗಿ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.  ನಾನು 8 ತಿಂಗಳು  ಮನೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.  ನಾನು ರವಿಕುಮಾರ್ ಎಂಬುವವರನ್ನು ನನ್ನನ್ನು ನೋಡಿಕೊಳ್ಳಲು ನೇಮಕ  ಮಾಡಿಕೊಂಡಿದ್ದ. ಸದರಿಯವರು ನನ್ನ ಸಂಬಂಧಿಕರು ಅಗಿರುತ್ತಾರೆ. ನಾನು  ಇತ್ತೀಚಿಗೆ  ಮಣಿಪಾಲ್ ಅಸ್ಪತ್ರೆಗೆ ಚಿಕಿತ್ಸೆಗೆ ಹೋಗಿದ್ದೆ. ಗಾಯಗಳು ಸಂಪೂರ್ಣವಾಗಿ ಗುಣಮುಖ ಅಗಿದೆ ಎಂದು  ವೈದ್ಯರು ನಾನು ಇತ್ತೀಚೆಗೆ ಹೋಗಿದ್ದಾಗ ಹೇಳಿರುತ್ತಾರೆ ಎಂದರೆ ಸರಿಯಲ್ಲ.  ನನಗೆ ಈಗ ಡ್ರೆಸ್ಸಿ ಂಗ್ ಅವಶ್ಯಕತೆ  ಇಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನನ್ನು ನೋಡಿಕೊಳ್ಳಲು ಒಬ್ಬರನ್ನು ನೇಮಕ ಮಾಡಿಕೊಂಡು 1 ಸಾವಿರ ರೂಪಾಯಿಗಳನ್ನು ಪ್ರತಿದಿನ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಹೆಚ್ಚಿ ನ ಪರಿಹಾರ ಪಡೆದುಕೊಳ್ಳಲು ಅಂಬೂಲೈನ್ಸ ರವರ ಜೊತೆ ಸೇರಿ ನಿಪಿ-15 ನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-15 ದಾಖಲೆಗಳಲ್ಲಿ ಕೆಲವೂಂದರಲ್ಲಿ ಮೊಹರು ಇದ್ದು, ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಿನಾಂಕ 13.10.2023 ಮತ್ತು  18.10.2023, 29.10.2023, 11.10.2023, 18.03.2024, 24.03.2024 ರ ದಾಖಲೆಗಳು ನಾನು ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ವೈದ್ಯರ ಸಲಹಾ ಚೀಟಿಗಳು ಇಲ್ಲದೇ ನಾನು ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ

ಸರಿಯಲ್ಲ. ನನಗೆ 30 ಲಕ್ಷ ರೂ ವರೆಗೆ ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿಜಿಯೋತೆರಪಿಯನ್ನು ರಿಷಬ್ ಕೇರ್ ಸೆಂಟರನಲ್ಲಿ ಮಾಡಿಸುತ್ತಿದ್ದು, ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆ ದಿನಗಳಲ್ಲಿ ಬರುತ್ತಿದ್ದರು. ಆ ರೀತಿ ಫಿಜಿಯೋತೆರಪಿ ಮಾಡಿಸುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಅದರಿಂದ ನಾನು ಹೇಳುವಷ್ಟು ಖರ್ಚು ಅಗಿಲ್ಲ ಎಂದರೆ ಸರಿಯಲ್ಲ. ನನಗೆ ಭವಿಷ್ಯದಲ್ಲಿ 10 ರಿಂದ 15 ಲಕ್ಷ ರೂಪಾಯಿ ಖರ್ಚು ಅಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-12 ರಲ್ಲಿ ಮೊಹರು ಮತ್ತು ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು 25 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4) ಪೋಲೀಸರಿಗೆ ಬಸವರಾಜು ಎಂಬುವವರು ದೂರು ನೀಡಿದ್ದರು. ಅದೇ ದಿನ ದೂರು ಕೊಟ್ಟಿರುತ್ತಾರೆ ಎಂದು ನನಗೆ ತಿಳಿದು ಬಂದಿರುತ್ತದೆ. ನನ್ನ ತಪ್ಪಿ ನಿಂದ ಅಪಘಾತವಾಗಿದ್ದರೂ ಸಹ ಪೋಲೀಸರ ಜೊತೆ ಸೇರಿ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅತೀ ವೇಗವಾಗಿ ಮತ್ತು ಅಜಾಗರೂಕತೆಯಿಂದ ಬೈಕನ್ನು ಚಾಲನೆ ಮಾಡಿಕೊಂಡು ಹೋಗಿ ಬಿದ್ದಿದ್ದು, ಬಸ್ಸಿನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿ ನಿಂದ ಅಪಘಾತವಾಗಿರುವುದರಿಂದ 2ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ